# ಮುನಿಶಾಮಿ ಅಜ್ಜನೂ ತಂಗಲಾನ್ ಸಿನಿಮಾವೂ



**ಕೆಜಿಎಫ್ ಮಣ್ಣಿನಲ್ಲಿ ಸಾವಿರಾರು ‘ತಂಗಲಾನರು’ ಹೂತುಹೋಗಿದ್ದಾರೆ. ‘ತಂಗಲಾನ್’ ಸಿನಿಮಾ ರಕ್ತ ಬಸಿದು ಚಿನ್ನ ಬಗೆದುಕೊಟ್ಟ ಸಾವಿರಾರು ಪೂರ್ವಸೂರಿಗಳ ಸಂಕಥನ. ಈಗ ಪಾಳು ಭೂಮಿಯನ್ನು ಕಾಯಲು ಯಾರಿದ್ದಾರೆ?**

**■ ಸುಬ್ರಮಣ್ಯ ಎಚ್.ಎಂ.**

ಮಾಗಿ ಕಾಲದ ಥಂಡಿ ರಾತ್ರಿಗಳು. ಭೂತಮ್ಮನ ಬೆಟ್ಟದಲ್ಲಿ ಗುಳ್ಳೆ ನರಿಗಳು ಗೂಳಿಟ್ಟಿದ್ದವು. ಅರೆಗಳಿಗೆಯಲ್ಲೇ ಭೂಮಿ ಕಂಪಿಸಿದ ಅನುಭವ! ಮನೆಗಳಲ್ಲಿನ ಎಲ್ಲ ವಸ್ತುಗಳೂ ಏಕಕಾಲಕ್ಕೆ ರೊಪ್ಪನೆ ಉರುಳಿ ಢಮಗುಟ್ಟಿದ ಸದ್ದು ಬೆಚ್ಚನೆ ಹೊದ್ದು ಮಲಗಿದ್ದ ಊರನ್ನೇ ಭಂಗಗೊಳಿಸಿತ್ತು.

ಈ ಸೀಮೆಗೆ ಭೂಮಿ ಕಂಪನ ಸಾಮಾನ್ಯವೇ. ಆ ದಿನದ ರಾತ್ರಿಯ ಕಂಪನ ರವಷ್ಟು ಜಾಸ್ತಿಯೇ ಇತ್ತು. ‘ಕೆಜಿಎಫ್ ಗಣಿಯಲ್ಲಿ ಮರಗಳ ಬೃಹತ್ ದಿಮ್ಮಿಗಳು ಒಂದಕ್ಕೊಂದು ತಕಲಾಡಿಕೊಂಡು ಭೂಮಿ ಅಲುಗಾಡಿದೆ’ ಎಂದು ಜನ ತಮ್ಮ ಕಲ್ಪನೆಯ ಮನೋಲಹರಿ ಹರಿಸಿದ್ದರು. ಆಳದ ಗಣಿಯಲ್ಲಿ ಸುರಂಗದ ಮಣ್ಣು ಕುಸಿಯದಿರಲೆಂದು ಆನೆ ಗಾತ್ರ ಇರೋ ಮರದ ದಿಮ್ಮಿಗಳೇ ಊರುಗೋಲು! ಹೀಗೊಂದು ಇಮ್ಯಾಜಿನೇಷನ್ ಊರಿನೋರದ್ದು.

ಆ ದಿನ ರಾತ್ರಿ ಹುಣಸೀಕೋಟೆ ದೊಣ್ಣೆಯಂಗ್ಟಮ್ಮನೋರ ರಾಗಿ ಕಣದ ಬಯಲಿನಲ್ಲಿ ಹೆಂಗಸ್ರು, ಗಂಡಸ್ರು ಸರಿ ರಾತ್ರಿ ಹೊತ್ತಲ್ಲಿ ಕಂಪನದ ವೈಜ್ಞಾನಿಕ ವಿಧಾನಗಳ ಪರಾಮರ್ಶೆಯಲ್ಲಿ ತೊಡಗಿದ್ದರು. ಉಳ್ಳೇರಹಳ್ಳಿ ಭೂತಮ್ಮನ ಬೆಟ್ಟದ ಕೆಳಗೂ ಗಣಿ ಸುರಂಗ ಹಾದುಹೋಗಿದ್ದು, ಮುಂದೊಂದು ದಿನ ಬೆಟ್ಟವೇ ಕುಸಿದು ಬೀಳೋ ಚಿಂತೆಯಲ್ಲಿದ್ದರು. ಬೆಟ್ಟದ ತಪ್ಪಲಿನ ವೀರಕಪುತ್ರ, ಹಳೇಪಾಳ್ಯ, ಉಳ್ಳೇರಹಳ್ಳಿ, ಹುಣಸೀಕೋಟೆ, ಬೆಟ್ಟದ ಇನ್ನೊಂದು ಬದಿಗೆ ಇರೋ ಮಿಟ್ಟಿಗಾನಹಳ್ಳಿ, ಟೇಕಲ್ ಹಳ್ಳಿಗಳು ಢಮಾರ್ ಅಂತಾ ಕುಸಿದೇ ಹೋಗ್ತವೆ ಅಂತಾ ಮೋಟು ಬೀಡಿಯೊಂದನ್ನು ಸ್ಟೈಲಾಗಿ ಬಾಯಿಗೆ ಇಟ್ಟುಕೊಂಡು ಗಟ್ಟೀಪುರ ಪುನುಗಪ್ಪನು ಕಾರ್ಣಿಕ ನುಡಿದ. ಅಲ್ಲೇ ಇದ್ದ ತೊದಲು ನುಡಿಯೋ ಕೇತುಗನು ‘ಭ...ಭ...ಲೇ... ಪುಂಗು’ ಎಂದು ನಗಾಡುತ್ತಾ, ಪಿರ್ರೆ ಮೇಲೆ ಜಾರಿದ್ದ ಚಡ್ಡಿ ಸರಿ ಮಾಡಿಕೊಂಡು ಎದ್ದುಹೋದ.

ರಾಗಿ ಕಣದಲ್ಲಿ ಸೇರಿದ್ದ ಹೆಂಗಸರೆಲ್ಲಾ ಎಲೆಯಡಿಕೆ ನಮಲುತ್ತಾ ನಿದ್ದೆ ಇಲ್ಲದೆ ಚಡಪಡಿಕೆಯಲ್ಲಿದ್ದರು. ಸರಿರಾತ್ರಿ ಹೊತ್ತಲ್ಲಿ ಬೀಸುತ್ತಿದ್ದ ಕುಳಿಗಾಳಿ